		ಬೆಂಗಳೂರು ಉತ್ತರ	1	76.08
		ಹೊಸಕೋಟೆ	1	48.56
		ಮಾಗಡಿ	1	41.82
		ಒಟ್ಟು	**8**	**284.22**
14	ಕೋಲಾರ	ಬಂಗಾರಪೇಟೆ	1	5213.21
		ಚಿಂತಾಮಣಿ	1	64.75
		ಶಿಡ್ಲಘಟ್ಟ	3	280.27
		ಒಟ್ಟು	**5**	**5558.23**
15	ಮಂಡ್ಯ	ಕೆ.ಆರ್.ಪೇಟೆ	2	10.64
		ಮಂಡ್ಯ	1	12.14
		ಶ್ರೀರಂಗಪಟ್ಟಣ	1	4
		ಪಾಂಡವಪುರ	1	11
		ಒಟ್ಟು	**5**	**37.78**
16	ತುಮಕೂರು	ಚಿಕ್ಕನಾಯಕನಹಳ್ಳಿ	35	1852.04
		ಗುಬ್ಬಿ	9	451.14
		ತಿಪಟೂರು	5	126.05
		ಶಿರಾ	1	38.04
		ಕುಣಿಗಲ್	1	4.85
		ಮಧುಗಿರಿ	1	2.02
		ಒಟ್ಟು	**52**	**2474.14**
17	ಹಾಸನ	ಅರಸೀಕೆರೆ	6	455.74
		ಚನ್ನರಾಯಪಟ್ಟಣ	5	575.47
		ಬೇಲೂರು	1	90
		ಒಟ್ಟು	**12**	**1121.21**
18	ಶಿವಮೊಗ್ಗ	ಭದ್ರಾವತಿ	1	97.12
		ಹೊಸನಗರ	1	2.42

		ಸಾಗರ	1	7.29
		ಶಿಕಾರಿಪುರ	1	17.5
		ತೀರ್ಥಹಳ್ಳಿ	2	33.97
		ಒಟ್ಟು	**6**	**158.3**
19	ಉಡುಪಿ	ಕುಂದಾಪುರ	12	1648.9
		ಬೆಳ್ತಂಗಡಿ	1	4.82
		ಒಟ್ಟು	**27**	**2512.58**
20	ಚಿಕ್ಕಮಗಳೂರು	ಮೂಡಿಗೆರೆ	1	4796.8
		ತರೀಕೆರೆ	2	86.4
		ಒಟ್ಟು	**3**	**4883.2**
21	ಮೈಸೂರು	ಮೈಸೂರು	4	99.39
		ನಂಜನಗೂಡು	3	373.57
		ಹುಣಸೂರು	3	8.64
		ಕೆ.ಆರ್.ನಗರ	1	4.05
		ಹೆಚ್.ಡಿ.ಕೋಟೆ	13	438.96
		ಒಟ್ಟು	**24**	**924.61**
22	ಕೊಡಗು	ಮಡಿಕೇರಿ	1	0.08
		ಒಟ್ಟು	**1**	**0.08**
		ಒಟ್ಟು ಮೊತ್ತ	**516**	**54686.74**

4364 (5238) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನ್ ಹತ್ಯೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸರ ಪಾತ್ರವೇನು; ಇದರಲ್ಲಿ (Special Task Force) ತೊಡಗಿಸಿಕೊಂಡ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಎಷ್ಟು;

ಆ) ಪಾರಿತೋಷಕ ಅಥವಾ award ಪಡೆದವರ ಸಂಖ್ಯೆ ಎಷ್ಟು; ಯಾವ ದಿನದಿಂದ ಈ ಕಾರ್ಯದಲ್ಲಿ ಮಗ್ನರಾದವರನ್ನು ಗುರುತಿಸಿ ಬಹುಮಾನಿಸ ಲಾಗಿದೆ;

ಇ) ಇದರಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ಕೂಡ ಇದ್ದಾರೆಯೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ನರಹಂತಕ ದಂತಚೋರ ವೀರಪ್ಪನ್ ಹಾಗೂ ಆತನ ಸಹಚರರ ಉಪಟಳವನ್ನು ನಿಗ್ರಹಿಸುವ ಸಲುವಾಗಿ ಕರ್ನಾಟಕ ಸರ್ಕಾರವು ದಿ:13/4/1993 ರಲ್ಲಿ ಪೂರ್ಣ ಪ್ರಮಾಣದ ಕಾರ್ಯಾಚರಣೆ ಪಡೆಯನ್ನು ರಚಿಸಿದ್ದು, ಅದೇ ರೀತಿಯಲ್ಲಿ ತಮಿಳುನಾಡಿನಲ್ಲಿಯೂ ಕೂಡ ಕಾರ್ಯಾಚರಣೆ ಪಡೆಯನ್ನು ಸಹ ರಚಿಸಿದ್ದು, ಕರ್ನಾಟಕ ಹಾಗೂ ತಮಿಳುನಾಡಿನ ಎರಡೂ ಕಾರ್ಯಾಚರಣೆ ಪಡೆಗಳನ್ನು ಪ್ರಾರಂಭದಿಂದಲೂ ಎಲ್ಲಾ ಹಂತಗಳಲ್ಲಿಯೂ ಜಂಟಿಯಾಗಿ ಕಾರ್ಯಾಚರಣೆಯನ್ನು ನಡೆಸುತ್ತಾ ಬಂದಿರುತ್ತವೆ. ಇದರ ಪರಿಣಾಮವಾಗಿ ವೀರಪ್ಪನ್ ತಂಡದಲ್ಲಿದ್ದ 150 ಜನಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯಲ್ಲಿದ್ದ ಹಾಗೂ ಆಗಿಂದಾಗ್ಗೆ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದ ಎಲ್ಲಾ ಸದಸ್ಯರನ್ನು ಒಂದಿಲ್ಲೊಂದು ಹಂತದಲ್ಲಿ ದಸ್ತಗಿರಿ ಮಾಡಲಾಗಿದೆ ಇಲ್ಲವೆ ಗುಂಡಿನ ಚಕಮಕಿಯಲ್ಲಿ ಹತ್ಯೆಗೀಡಾಗಿರುತ್ತಾರೆ. ಅದೇ ರೀತಿಯಲ್ಲಿ ಕರ್ನಾಟಕ ತಮಿಳುನಾಡಿನ ಎರಡೂ ಕಾರ್ಯಾಚರಣೆ ಪಡೆಗಳು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ದಿ: 18/10/2004 ರಂದು ವೀರಪ್ಪನ್ ಹಾಗೂ ಉಳಿದಿದ್ದ 3 ಜನ ಸಹಚರರ ಹತ್ಯೆಯಾಗಿದ್ದು, ಕಾರ್ಯಾಚರಣೆಯು ಯಶಸ್ವಿಯಾಗಿ ಮುಕ್ತಾಯ ಗೊಂಡಿರುತ್ತದೆ. ಈ ಮೂಲಕ ಎರಡೂ ರಾಜ್ಯಗಳಿಗೆ ಇದ್ದ ಬಹುದೊಡ್ಡ ಸಮಸ್ಯೆಯು ಪರಿಹಾರವಾದಂತಾಗಿದೆ. ಮುಂದೆ ವೀರಪ್ಪನ್ ಹತ್ಯೆಯಾಗಿ ಕಾರ್ಯಾಚರಣೆಯು ಯಶಸ್ವಿಯಾದ ದಿನದಂದು ಕರ್ನಾಟಕ ಕಾರ್ಯಾಚರಣೆ ಪಡೆಯಲ್ಲಿ 754 ಜನ ಪೊಲೀಸ್ ಅಧಿಕಾರಿಗಳು/ ಸಿಬ್ಬಂದಿಗಳು ವಿವಿಧ ಕರ್ತವ್ಯಗಳ ಮೇಲಿದ್ದರು.

ಆ) ನರಹಂತಕ ವೀರಪ್ಪನ್ ಹಾಗೂ ಆತನ ತಂಡದ 3 ಜನ ಸದಸ್ಯರನ್ನು ಸಂಹಾರ ಮಾಡಿದ ದಿನಾಂಕ: 18/10/2004 ರಂದು ಕರ್ನಾಟಕ

ರಾಜ್ಯದ ವೀರಪ್ಪನ್ ಕಾರ್ಯಾಚರಣೆಯಲ್ಲಿ ತೊಡಗಿದ್ದ 754 ಪೊಲೀಸ್ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಈ ಕೆಳಗಿನಂತೆ ನಗದು ಬಹುಮಾನವನ್ನು ಮಂಜೂರಾತಿ ನೀಡಿದೆ.

3 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು ರೂ. 3.00 ಲಕ್ಷ
2 ವರ್ಷ ಮತ್ತು 3 ವರ್ಷದೊಳಗೆ ರೂ. 2.00 ಲಕ್ಷ
1 ವರ್ಷ ಮತ್ತು 2 ವರ್ಷದೊಳಗೆ ರೂ. 1.00 ಲಕ್ಷ
1 ವರ್ಷಕ್ಕಿಂತ ಕಡಿಮೆ ರೂ. 50,000/-

ಹಾಗೂ ಅವರುಗಳ ಸ್ವಗ್ರಾಮದ (Home Town) ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಅವರು ಇಚ್ಛಿಸುವ ಜಿಲ್ಲೆಯ ಇತರ ಸ್ಥಳದಲ್ಲಿ ಈ ಕೆಳಗಿನ ಅಳತೆಯ ಉಚಿತ ನಿವೇಶನ ಹಂಚುವುದು.

ಇನ್ಸ್‌ಪೆಕ್ಟರ್ ವೃಂದಕ್ಕಿಂತ ಕೆಳಮಟ್ಟದ ವೃಂದದವರಿಗೆ – 30' x 40'
ಡಿ.ವೈ.ಎಸ್.ಪಿ. ವೃಂದಕ್ಕೆ ಮೇಲ್ಪಟ್ಟ ವೃಂದದವರಿಗೆ – 40' x 60'

ಮತ್ತು ದಿನಾಂಕ : 18/10/2004 ರಂದು ಎಸ್.ಟಿ.ಎಫ್. ಪಡೆಯಲ್ಲಿದ್ದ ಎಲ್ಲಾ ಸಿಬ್ಬಂದಿಗೂ ಒಂದು ಬಾರಿಗೆ ಮಾತ್ರ ಒಂದು ವೇತನ ಬಡ್ತಿಯನ್ನು ಮಂಜೂರು ಮಾಡಿದೆ.

ಇ) ಇಲ್ಲ.

4366 (5240) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಭಾಗಾಧಿಕಾರಿ ಹುದ್ದೆಯನ್ನು ರದ್ದು ಪಡಿಸಿದಂತೆ, ಉಪ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸುವಂತೆ ತೀರ್ಮಾನವಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಉಪ ವಿಭಾಗಾಧಿಕಾರಿಗಳ ಹುದ್ದೆ ರದ್ದಾಗದೇ ಮುಂದುವರೆದುಕೊಂಡು ಬಂದಿರುವುದರ ಔಚಿತ್ಯವೇನು;

ಇ) ಉಪ ವಿಭಾಗಗಳೆಷ್ಟು ಹಾಗೂ ಅದಕ್ಕೆ ರಾಜ್ಯದಲ್ಲಿರುವ ಉಪ ವಿಭಾಗಾಧಿಕಾರಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ. ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ ವಿಭಾಗಾಧಿಕಾರಿಗಳ ಹುದ್ದೆ ಮತ್ತು ಕಛೇರಿಗಳನ್ನು ಮಾತ್ರ ರದ್ದುಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಒಟ್ಟು 52 ಉಪ ವಿಭಾಗಗಳಿದ್ದು ಅಷ್ಟೇ ಸಂಖ್ಯೆಯ ಉಪ ವಿಭಾಗಾಧಿಕಾರಿಗಳಿರುತ್ತಾರೆ.

4367 (5352) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಲಾಮಾರಿ ನೀರಾವರಿ ಯೋಜನೆಯಲ್ಲಿ ಸಂತ್ರಸ್ತರಾದ ಕುಟುಂಬಗಳೆಷ್ಟು; ಸದರಿ ಕುಟುಂಬದವರಿಗೆ ಸರ್ಕಾರವು ಕೊಡಮಾಡುವ ನಿಗದಿತ ಸೌಲಭ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಿಕೊಟ್ಟಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಮುಲ್ಲಾಮಾರಿ ಪುನರ್ ವಸತಿ ಕೇಂದ್ರದಲ್ಲಿ ಅಪೂರ್ಣವಾಗಿರುವ ಕಾಮಗಾರಿಗಳು ಯಾವುವು;

ಇ) ಮುಲ್ಲಾಮಾರಿ ಸಂತ್ರಸ್ತರಿಗಾಗಿ ಕೊಡಬೇಕಾದ ನಗದಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು; ಯಾವಾಗ ಪಾವತಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಮೇಲ್ದಂಡೆ ಮುಲ್ಲಾಮಾರಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡ 140 ರೈತ ಸಂತ್ರಸ್ಥ ಕುಟುಂಬದವರಿಗೆ ಸರ್ಕಾರವು ಕೊಡುವ ನಿಗದಿತ ಸೌಲಭ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಆ) ಮುಲ್ಲಾಮಾರಿ ಪುನರ್ ವಸತಿ ಕೇಂದ್ರದಲ್ಲಿ ಅಪೂರ್ಣವಾಗಿರುವ ಕಾಮಗಾರಿಗಳು ಯಾವುದು ಇರುವುದಿಲ್ಲ.

ಇ) ಮುಲ್ಲಾಮಾರಿ ಮೇಲ್ದಂಡೆ ಯೋಜನೆಯಲ್ಲಿ ಸಂತ್ರಸ್ಥರಾದ 140 ಕುಟುಂಬಗಳ ಪೈಕಿ 122 ಕುಟುಂಬಗಳಿಗೆ ರೂ.180.82 ಲಕ್ಷಗಳ ಪರಿಹಾರ

ಧನವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಲಾಗಿದೆ. ಉಳಿದ 18 ಕುಟುಂಬಗಳಿಗೆ ರೂ.7.20 ಲಕ್ಷಗಳು ಪಾವತಿಸಬೇಕಾಗಿದ್ದು, ಇದಲ್ಲದೆ ಹೆಚ್ಚಿನ ಅನುದಾನ ಕೋರಿ ನ್ಯಾಯಾಲಯಕ್ಕೆ ಮೊರೆ ಹೋದ ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ.47.17 ಲಕ್ಷ ಪರಿಹಾರ ಧನ ಪಾವತಿಸಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ಮುಲ್ಲಾಮಾರಿ ಮೇಲ್ದಂಡೆ ಯೋಜನೆಗಾಗಿ ರೂ.110 ಲಕ್ಷ ಅನುದಾನ ಲಭ್ಯವಿದ್ದು ಪರಿಹಾರ ಧನವನ್ನು ಪಾವತಿಸಲಾಗುವುದು.

4368 (5353) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪುರಸಭೆಗಳು ಅಸ್ತಿತ್ವದಲ್ಲಿವೆ (ಜಿಲ್ಲಾವಾರು ಸಂಖ್ಯೆ ನೀಡುವುದು);

ಆ) ಅಸ್ತಿತ್ವದಲ್ಲಿರುವ ಪುರಸಭೆಗಳಿಗೆ 2003-04 ಮತ್ತು 2004-05ನೇ ಸಾಲಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಮಂಜೂರು ಮಾಡಿದ ಮತ್ತು ಬಿಡುಗಡೆಗೊಳಿಸಲಾದ ಹಣದ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಇ) ಸದರಿ ನಿಗದಿತ ಅನುದಾನದ ಮೊತ್ತವನ್ನು ಸಮಾನವಾಗಿ ಹಂಚಿಕೆ ಮಾಡಲಾಗಿದೆಯೇ, ಇಲ್ಲವಾದಲ್ಲಿ ಅಸಮಾನತೆಗೆ ಕಾರಣಗಳೇನು;

ಈ) ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಿಗಾಗಿ ಪೌರಾಡಳಿತ ಇಲಾಖೆಯು ಅಭಿವೃದ್ಧಿ ಪರ ವಿಶೇಷ ಯೋಜನೆಗಳನ್ನೇನಾದರೂ ರೂಪಿಸಿ ಕಾರ್ಯಗತಗೊಳಿಸಿದೆಯೇ, ಹೌದಾದಲ್ಲಿ ಅದರ ವಿವರಗಳೇನು, ಇಲ್ಲವಾದಲ್ಲಿ ಆ ಕುರಿತಾದ ಚಿಂತನೆಯು ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು) :

ಅ) ರಾಜ್ಯದಲ್ಲಿ ಪ್ರಸ್ತುತ 79 ಪುರಸಭೆಗಳು ಅಸ್ತಿತ್ವದಲ್ಲಿವೆ. (ಜಿಲ್ಲಾವಾರು ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಆ) ಜಿಲ್ಲಾವಾರು ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಇ) ಅನುದಾನದ ಮೊತ್ತವನ್ನು ಸಮಾನವಾಗಿ ಹಂಚಿಕೆ ಮಾಡಿರುವುದಿಲ್ಲ. ಸಂಬಂಧಿಸಿದ ಪುರಸಭೆಗಳ ಜನಸಂಖ್ಯೆ, ವಿಸ್ತೀರ್ಣ, ಸಿಬ್ಬಂದಿಯ ಸಂಖ್ಯೆ, ರಸ್ತೆಗಳ ಉದ್ದ, ಬೀದಿ ದೀಪಗಳು, ಆಸ್ಪತ್ರೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಇವುಗಳಿಗೆ ಅನುಗುಣವಾಗಿ ಪ್ರತಿ ಪುರಸಭೆಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.

ಈ) ಇಲ್ಲ.

4369 (5354) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2003–04 ಮತ್ತು 2004–05ನೇ ಸಾಲಿಗೆ ಅನ್ವಯವಾಗುವಂತೆ ರಾಜ್ಯ ಸಾರಿಗೆ ಸಂಸ್ಥೆಯವರು ಖರೀದಿಸಿದ ಬಸ್ಸುಗಳ ಸಂಖ್ಯೆ ಎಷ್ಟು; ಪಾವತಿಸಿದ ಮೊಬಲಗು ಎಷ್ಟು; ಸದರಿ ಬಸ್ಸುಗಳನ್ನು ಜಿಲ್ಲಾವಾರು ಒದಗಿಸಿಕೊಟ್ಟ ವಿವರಗಳೇನು, ಬೇಡಿಕೆಗೆ ಅನುಗುಣವಾಗಿ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆಯೇ, ಬೇಡಿಕೆಗೆ ಅನುಗುಣವಾಗಿ ಇನ್ನೂ ಎಷ್ಟು ಬಸ್ಸುಗಳನ್ನು ಖರೀದಿಸುವ ಪ್ರಸ್ತಾವನೆ ಸಂಸ್ಥೆಯ ಮುಂದಿದೆ;

ಆ) ಹೈ.ಕ.ವಿಭಾಗದಲ್ಲಿ ಬಸ್ಸುಗಳಲ್ಲಿ ಪ್ರಯಾಣಿಕರ ಒತ್ತಡದ ಜೊತೆಗೆ ಬಸ್ಸುಗಳಲ್ಲಿಯೇ ಅಧಿಕ ಭಾರದ ಸರಕುಗಳನ್ನು ಕೂಡ ಸಾಗಿಸುತ್ತಿರುವುದನ್ನು ಸರಕಾರ ಗಮನಿಸಿದೆಯೇ, ಗಮನಿಸಿದ್ದಲ್ಲಿ ಆ ಕುರಿತು ಕ್ರಮಗಳೇನು;

ಇ) ಪ್ರಯಾಣಿಕರ ಅನುಕೂಲಕ್ಕಾಗಿ ಇರುವ ಬಸ್ಸುಗಳಲ್ಲಿ ಸರಕು ಸಾಗಾಣಿಕೆ ಯನ್ನು ನಿರ್ಬಂಧಿಸುವ ಮತ್ತು ಪ್ರಯಾಣಿಕರ ಒತ್ತಡವನ್ನು ತಪ್ಪಿಸಲು ಹೆಚ್ಚು ಬಸ್ಸುಗಳನ್ನು ವ್ಯವಸ್ಥೆಗೊಳಿಸುವಲ್ಲಿ ಸರಕಾರದ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ)

ವಿವರ	ಕ.ರಾ.ರ.ಸಾ.ಸಂ		ಬೆಂ.ಮ.ಸಾ.ಸಂ		ವಾ.ಕ.ರ.ಸಾ.ಸಂ		ಈ.ಕ.ರ.ಸಾ.ಸಂ	
	2003–04	2004–05	2003–04	2004–05	2003–04	2004–05	2003–04	2004–05
ಹೊಸ ಬಸ್ಸುಗಳ ಸೇರ್ಪಡೆ	657	1046	786	620	411	273	131	11
ಪಾವತಿಸಿದ ಮೊತ್ತ (ಲಕ್ಷ ರೂ.ಗಳಲ್ಲಿ)	6399.00	13680.00	13911.97		3750.9	3347.3	1253.48	92.25

ಜಿಲ್ಲಾವಾರು ವಿವರ :

ಕ.ರಾ.ರ.ಸಾ.ಸಂ. : ಬೆಂಗಳೂರು (ಕೇಂದ್ರ) – 324, ಬೆಂಗಳೂರು ಗ್ರಾಮಾಂತರ) – 84, ತುಮಕೂರು – 126, ಕೋಲಾರ – 228, ಮೈಸೂರು (ನಗರ) – 141, ಮೈಸೂರು (ಗ್ರಾಮಾಂತರ) – 167, ಹಾಸನ – 107, ಚಿಕ್ಕಮಗಳೂರು – 116, ಮಂಗಳೂರು – 131, ದಾವಣಗೆರೆ – 179.

ಬೆಂ.ಮ.ಸಾ.ಸಂ. : ಬಸ್ಸುಗಳನ್ನು ಬೆಂಗಳೂರು ನಗರ ಮತ್ತು ಹೊರವಲಯ ದಲ್ಲಿ ಕಾರ್ಯಾಚರಣೆ ಮಾಡುತ್ತಿದೆ.

ವಾ.ಕ.ರ.ಸಾ.ಸಂ. : ಹುಬ್ಬಳ್ಳಿ, – 46, ಬೆಳಗಾಂ – 7, ಬಿಜಾಪುರ – 100, ಶಿರಸಿ – 88, ಗದಗ – 79, ಬಾಗಲಕೋಟೆ – 5, ಹಾವೇರಿ – 68, ಚಿಕ್ಕೋಡಿ – 103.

ಈ.ಕ.ರ.ಸಾ.ಸಂ. : ಬೀದರ್ – 20, ಕೊಪ್ಪಳ – 29, ಬಳ್ಳಾರಿ – 38, ಗುಲ್ಬರ್ಗಾ – 44,

ಹೊಸ ಬಸ್ಸುಗಳನ್ನು ಖರೀದಿಸುವ ಪ್ರಸ್ತಾವನೆ :

ಕ.ರಾ.ರ.ಸಾ.ಸಂ.	ಬೆಂ.ಮ.ಸಾ.ಸಂ.	ವಾ.ಕ.ರ.ಸಾ.ಸಂ.	ಈ.ಕ.ರ.ಸಾ.ಸಂ.
1491	ಇಲ್ಲ	600	539

ಆ) ಅಧಿಕ ಭಾರದ ಸರಕುಗಳನ್ನು ಸಾಗಿಸುವುದನ್ನು ನಿರ್ಬಂಧಿಸಲಾಗಿರು ವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಅಧಿಕ ಭಾರದ ಸರಕು ಸಾಗಿಸುವುದನ್ನು ನಿರ್ಬಂಧಿಸಲಾಗಿದೆ ಮತ್ತು ಪ್ರಯಾಣಿಕರ ಒತ್ತಡ ತಪ್ಪಿಸಲು ಹೆಚ್ಚಿನ ಸಂಖ್ಯೆಯ ಬಸ್ಸುಗಳನ್ನು ಓಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

4370 (5355) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರಕು ಸಾಗಾಣಿಕೆ ವಾಹನಗಳಿಗೆ ವಿವಿಧ ವರ್ಗ ಮತ್ತು ಗಾಲಿಗಳ ಆಧಾರದ ಮೇಲೆ ಸಾಗಾಣಿಕೆ ನಿಗದಿ ಮಾಡಿದ ಭಾರದ ಪ್ರಮಾಣ ಎಷ್ಟು;

ಆ) ಸರಕು ಸಾಗಾಣಿಕೆ ವಾಹನಗಳು ನಿಗದಿಗಿಂತ ಹೆಚ್ಚು ಭಾರದ ಸರಕು, ಅದಿರು ಮುಂತಾದವುಗಳನ್ನು ಸಾಗಿಸುತ್ತಿರುವುದನ್ನು ಇಲಾಖೆಯು ಗಮನಿಸಿಲ್ಲವೆ; ಗಮನಿಸಿದ್ದಲ್ಲಿ ಆ ಕುರಿತಾದ ಸರ್ಕಾರದ ಕ್ರಮಗಳೇನು ಮತ್ತು ಅಂತಹ ಎಷ್ಟು ಪ್ರಕರಣಗಳನ್ನು ಕಳೆದೆರಡು ವರ್ಷಗಳಲ್ಲಿ ದಾಖಲಿಸಿ ದಂಡ ವಿಧಿಸಲಾಗಿದೆ; ಅದರಿಂದ ಜಮೆಯಾದ ಮೊತ್ತವೆಷ್ಟು;

ಇ) ರಾಜ್ಯದಲ್ಲಿನ ಆರ್.ಟಿ.ಓ. ಚೆಕ್‌ಪೋಸ್ಟ್‌ಗಳ ಮೂಲಕ ಸಂಗ್ರಹವಾಗುತ್ತಿರುವ ಆದಾಯದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ವಿವಿಧ ವರ್ಗದ ಸರಕು ಸಾಗಾಣಿಕೆ ವಾಹನಗಳಿಗೆ ಅಚ್ಚು ಮತ್ತು ಗಾಲಿಗಳ ಆಧಾರದ ಮೇಲೆ ಕೇಂದ್ರ ಸರ್ಕಾರದ ಅಧಿಸೂಚನೆ ಸಂ.728/(ಇ) ದಿ: 18.10.1996 ಮತ್ತು ಅಧಿಸೂಚನೆ 517 (ಇ) ದಿನಾಂಕ : 26.5.2000